1	2	3
24.	ನಂಗಾರು ಕುಟುಂಬ ಇರುವ ನೈಸರ್ಗಿಕ ಯೋಜನೆ ಪೈಪ್	0.500
25.	ಅರ್ವತ್ತೊಕ್ಲು ಗ್ರಾಮದ ಜಾನಕಿ ಮನೆ ಹತ್ತಿರ ತೆರೆದ ಬಾವಿ ನಿರ್ಮಾಣ	0.500
26.	ಪೇರೂರಿನಿಂದ ಅಪ್ಪನೆರವಂಡ ಕುಟುಂಬಸ್ಥರಿಗೆ ನೈಸರ್ಗಿಕ ನೀರು ಸರಬರಾಜು ಯೋಜನೆ	1.000
27.	ಇತರೆ	1.000
	ಒಟ್ಟು ಮುಗಿದಿರುವ ಕಾಮಗಾರಿಗಳ ಸಂಖ್ಯೆ –26.	

367(523) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯ ಕೂಡಿಗೆ ಕೃಷಿ ಇಲಾಖೆಯಲ್ಲಿ ಶೇಖರಿಸಿಟ್ಟ ಭತ್ತದ ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ನಾಶವಾಗಲು ಕಾರಣವೇನು;

ಇ) ಭತ್ತದ ಬೆಳೆ ನಾಶವಾಗಿರುವುದರಿಂದ ಪರಿಹಾರ ವಿತರಣೆ ಮಾಡಲಾಗಿದೆಯೇ (ವಿವರ ನೀಡುವುದು)?

ಶ್ರೀ ಬಂಡಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಬಂದಿದೆ.

ಆ) ಮಾರ್ಚ್ 2006ರ ಮಾಹೆಯ 1 ಮತ್ತು 2ನೇ ವಾರದಲ್ಲಿ ಬಿದ್ದ ಆಕಸ್ಮಿಕ ಮಳೆಯಿಂದ ಹಾಗೂ ಬಿರುಗಾಳಿಯಿಂದ ಕೂಡಿಗೆ ಫಾರಂನಲ್ಲಿ ಶೇಖರಿಸಿ ಇಟ್ಟಿದ್ದ ಭತ್ತದ ಮೆದೆಯಲ್ಲಿ ಅಂದಾಜು 50 ಕ್ವಿಂಟಾಲ್ ಭತ್ತ ನಷ್ಟವಾಗುವ ಸಾಧ್ಯತೆ ಇದೆ. ಭತ್ತದ ಮೆದೆಗೆ ಸೂಕ್ತವಾದ ಟಾರ್‌ಪಾಲ್‌ಗಳು ಮತ್ತು ಪ್ಲಾಸ್ಟಿಕ್ ಶೀಟ್‌ಗಳನ್ನು ಹೊದಿಸಿದ್ದರೂ ಸಹ ದಿನಾಂಕ: 4–3–2006ರಂದು ಬಂದ ಬಿರುಗಾಳಿಯಿಂದ ಟಾರ್‌ಪಾಲ್ ಶೀಟ್ ಹಾರಿಹೋಗುವುದನ್ನು ತಡೆಗಟ್ಟಲಾಗಲಿಲ್ಲ. ದಿನಾಂಕ: 5–3–2006 ರಿಂದ 10–3–2006ರವರೆಗೆ 56.70 ಮೀ.ಮೀ. ಮಳೆಯಾಗಿರುತ್ತದೆ. ಇದು ಪ್ರಕೃತಿ ವಿಕೋಪ ಮಳೆಯೆಂದು ಪರಿಗಣಿಸಲಾಗಿದೆ.

ಇ) ಬರ ಪರಹಾರ ಮಾರ್ಗಸೂಚಿಯಡಿಯಲ್ಲಿ ಸದರಿ ವಿಷಯದ ಬಗ್ಗೆ ಪರಿಶೀಲಿಸಲಾಗುತ್ತಿದೆ.

368(524) ಶ್ರೀ ಬೋಪಯ್ಯ (ಮಡಿಕೇರಿ) : ಮಾನ್ಯ ಮೀನುಗಾರಿಕೆ, ಮುಜರಾಯಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಡಿಕೇರಿ ನಗರದ ರಾಜರ ಗದ್ದಿಗೆಗೆ ಸಂಬಂಧಪಟ್ಟಂತೆ ಇರುವ ಜಾಗದ ವಿಸ್ತೀರ್ಣವೆಷ್ಟು;

ಆ) ರಾಜರ ಗದ್ದುಗೆ ಅಭಿವೃದ್ಧಿಗೆ ಈ ಮೊದಲು ಹಣ ಬಿಡುಗಡೆಯಾಗಿದೆಯೇ;

ಇ) ಹಾಗಿದ್ದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ಒದಗಿಸುವುದು);

ಈ) ರಾಜರ ಗದ್ದಿಗೆ ಸೇರಿದ ಜಾಗವನ್ನು ಅತಿಕ್ರಮಿಸಿಕೊಂಡಿರುವ ಜನ ಮತ್ತು ಒಟ್ಟು ವಿಸ್ತೀರ್ಣವೆಷ್ಟು;

ಉ) ಅತಿಕ್ರಮಣಕಾರರನ್ನು ಖಾಲಿ ಮಾಡಲು ಹೈಕೋರ್ಟ್ ಆದೇಶವಿದೆಯೇ;

ಊ) ಈ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು)?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಹಾಗೂ ತೋಟಗಾರಿಕೆ ಸಚಿವರು)

ಅ) 18.55 ಎಕರೆ ವಿಸ್ತೀರ್ಣದ ಜಮೀನು ಸರ್ವೆ ನಂ. 30/1 ರಲ್ಲಿ ಇರುತ್ತದೆ.

ಆ) ರಾಜರ ಗದ್ದುಗೆ ನಿರ್ವಹಣೆಗಾಗಿ ವಾರ್ಷಿಕ ಅನುದಾನ ರೂ. 5,000/0 ಮಂಜೂರು ಮಾಡಲಾಗುತ್ತಿದ್ದು, ಅಭಿವೃದ್ಧಿ ಕಾರ್ಯಕ್ಕೆ ಯಾವ ಹಣವು ಬಿಡುಗಡೆಯಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ರಾಜರ ಗದ್ದಿಗೆ ಸೇರಿದ ಜಮೀನಿನಲ್ಲಿ 1.10 ಎಕರೆ ಜಾಗದಲ್ಲಿ ಒಟ್ಟು 32 ಕುಟುಂಬದವರು ಅತಿಕ್ರಮಿಸಿಕೊಂಡಿದ್ದು ಮನೆಗಳನ್ನು ನಿರ್ಮಿಸಿ ವಾಸವಿರುತ್ತಾರೆ.

ಉ) ಹೌದು. ಮಾನ್ಯ ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯ ಸಂಖ್ಯೆ: ಆರ್‌ಪಿ 41264/2001 (GM-PIL) ದಿ: 29–11–2002 ರಲ್ಲಿ ಒತ್ತುವರಿ ಖಿಲ್ಲಾ ಪಡಿಸಲು ಆದೇಶ ನೀಡಿರುತ್ತಾರೆ. ಆದರೆ ಒತ್ತುವರಿದಾರರು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂಖ್ಯೆ: 22962/2003 (KLR-RES) ಹಾಗೂ ರಿಟ್ ಅರ್ಜಿ ಸಂಖ್ಯೆ: 44455–44473/2003 (KLR-RES) ಮೇರೆ ಸಲ್ಲಿಸಿರುವ ರಿಟ್ ಅರ್ಜಿಯನ್ನು ಅನುಸರಿಸಿ, ದಿ: 30–5–2003 ಹಾಗೂ ದಿ: 14–10–2003 ರಂದು ಆದೇಶ ಹೊರಡಿಸುತ್ತಾ, ಒತ್ತುವರಿದಾರರು ತಹಸೀಲ್ದಾರ್‌ರ ಮುಂದೆ ಸಲ್ಲಿಸಿದ ತಕರಾರು ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಂಡು ಸೂಕ್ತ ಆದೇಶ ಹೊರಡಿಸಬೇಕೆಂದು ಅಲ್ಲಿಯವರೆಗೆ ಒತ್ತುವರಿಯನ್ನು ಖಿಲ್ಲಾ ಪಡಿಸುವ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬಾರದೆಂದು ಆದೇಶಿಸಿರುತ್ತಾರೆ.

ಊ) ಮಾನ್ಯ ಉಚ್ಚನ್ಯಾಯಾಲಯದ ಆದೇಶವನ್ನು ಅನುಸರಿಸಿ ಒತ್ತುವರಿದಾರರು ತಹಸೀಲ್ದಾರರ ಮುಂದೆ ಸಲ್ಲಿಸಿದ ತಕರಾರಿಗೆ ಸ್ಪಂದಿಸಿ, ವಿಚಾರಣೆ ನಡೆಸಿ, ಸಂಖ್ಯೆ: ನಿವೇಶನ/ 210/03–04, ದಿನಾಂಕ: 16–7–2004ರಂತೆ ಆದೇಶ ನೀಡಿ, ಒತ್ತುವರಿದಾರರು ನೀಡಿರುವ ತಕರಾರು ಅರ್ಜಿಗಳನ್ನು ವಿಚಾರಣೆಗೊಳಪಡಿಸಿ, ತಕರಾರನ್ನು ತಿರಸ್ಕರಿಸಿ, ಆದೇಶಿಸಿದ ಮೇರೆ ಒತ್ತುವರಿದಾರರು ಕರ್ನಾಟಕ ಭೂ ಕಂದಾಯ ಕಾಯ್ದೆ 1961ರ ಕಲಂ 49 ರಡಿಯಲ್ಲಿ ಉಪವಿಭಾಗಾಧಿಕಾರಿಯವರಿಗೆ ಮೇಲ್ಮನವಿ ಸಲ್ಲಿಸಿದ ಮೇರೆಗೆ ಒತ್ತುವರಿದಾರರಿಗೆ ನೋಟೀಸು ನೀಡಿ, ವಿಚಾರಣೆ ನಡೆಸಿ, ದಿನಾಂಕ: 16–3–2006

ರಂದು ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ. ಹಾಲಿ ಒತ್ತುವರಿದಾರರನ್ನು ಖಿಲ್ಲಾಪಡಿಸುವ ಬಗ್ಗೆ ಮಡಿಕೇರಿ ತಹಸೀಲ್ದಾರರು ಕ್ರಮಕೈಗೊಳ್ಳುತ್ತಿದ್ದಾರೆ.

369(519) ಶ್ರೀ ಧ್ರುವನಾರಾಯಣ ಆರ್. : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಿಂದ ಪ್ರಚಾರ ಹಾಗು ತರಬೇತಿ ಕಾರ್ಯಕ್ರಮಗಳಿಗಾಗಿ ಕಳೆದ 3 ವರ್ಷಗಳಲ್ಲಿ ಮಾಡಿರುವ ವೆಚ್ಚವೆಷ್ಟು (ಕಾರ್ಯಕ್ರಮಗಳವಾರು ವೆಚ್ಚಗಳ ವಿವರ ನೀಡುವುದು);

ಆ) ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ವೈಟಪ್ ಯೋಜನೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಸಹಾಯ ಗುಂಪುಗಳು ಯಾವುವು;

ಇ) ಇವುಗಳಲ್ಲಿ ಯೋಜನೆಯ ಅನುಷ್ಠಾನದಿಂದ ಆರ್ಥಿಕ ಪ್ರಗತಿ ಹೊಂದಿರುವ ಗುಂಪುಗಳು ಯಾವುವು (ಯಶೋಗಾಥೆ ಮೂಲಕ ಅಂಕಿ ಅಂಶಗಳನ್ನು ನೀಡುವುದು)?

ಶ್ರೀ ಬಂಡೆಪ್ಪಾ ಕಾಶಂಪೂರ್ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಿಂದ ಪ್ರಚಾರ ಹಾಗೂ ತರಬೇತಿ ಕಾರ್ಯಕ್ರಮಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ರೂ. 2559.07 ಲಕ್ಷಗಳನ್ನು ವೆಚ್ಚಮಾಡಿದ್ದು ಕಾರ್ಯಕ್ರಮವಾರು ವೆಚ್ಚದ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ವೈಟಪ್ ಯೋಜನೆಯಡಿಯಲ್ಲಿ ವಿವಿಧ ನಾಮದೇಯ ಹೊಂದಿರುವ ಒಟ್ಟು 10239 ಸ್ವಸಹಾಯ ಗುಂಪುಗಳು ಕಾರ್ಯ ನಿರ್ವಹಿಸುತ್ತಿದೆ.

ಇ) ಈ ಯೋಜನೆಯಡಿ ಆರ್ಥಿಕ ಪ್ರಗತಿ ಹೊಂದಿರುವ ಸ್ವಸಹಾಯ ಗುಂಪುಗಳ ಸಂಖ್ಯೆ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

ಗದಗ–11, ಕೋಲಾರ–3, ಕೊಪ್ಪಳ–8, ಗುಲ್ಬರ್ಗ–6, ಚಿತ್ರದುರ್ಗ–1, ಉಡುಪಿ–1, ಹಾಸನ–1, ದಾವಣಗೆರೆ–3, ಶಿವಮೊಗ್ಗ–5, ಧಾರವಾಡ–1, ಬಾಗಲಕೋಟೆ–12, ಚಾಮರಾಜನಗರ–2, ಬೆಳಗಾಂ–6, ಬಿಜಾಪುರ–2, ತುಮಕೂರು–6, ಉತ್ತರ ಕನ್ನಡ–7, ಹಾವೇರಿ–6 ಹಾಗೂ ಬೆಂ.ನಗರ ಜಿಲ್ಲೆ–1.

ಅನುಬಂಧ–1

ಕೃಷಿ ಇಲಾಖೆಯ ಪ್ರಚಾರ ಮತ್ತು ತರಬೇತಿ ಕಾರ್ಯಕ್ರಮಗಳ ಅಡಿಯಲ್ಲಿ ಮಾಡಿರುವ ವೆಚ್ಚದ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾರ್ಯಕ್ರಮ	ವರ್ಷವಾರು ವೆಚ್ಚದ ವಿವರ 2002–03	2003–04	2004–05	ಒಟ್ಟು
1.	ಕೃಷಿ ವಾರ್ತಾ ಘಟಕ	36.48	21.64	32.09	90.21
2.	ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ	32.81	9.74	11.75	54.3